# ಆತ್ಮವಿಕಾಸ- ವಿದ್ಯಾರ್ಥಿಗಳಿಗೆ ಕಿವಿಮಾತು -೪

-ಸ್ವಾಮಿ ಪ್ರೇಮೇಶಾನಂದ

*ಅನುವಾದ:*
ಸ್ವಾಮಿ
ಕರುಣಾಕರಾನಂದ

## ಮನಸ್ಸು

ಮನುಷ್ಯನ ಮನಸ್ಸಿಗೆ ಅನಂತಶಕ್ತಿಯಿದೆ. ಯಾರು ಈ ಶಕ್ತಿಯನ್ನು ಒಟ್ಟುಗೂಡಿಸಿ ಏಕಾಗ್ರತೆಯನ್ನು ಸಾಧಿಸಬಲ್ಲರೊ, ಅವರುಗಳೇ ಜಗತ್ತಿನಲ್ಲಿ ಪ್ರತಿಭಾನ್ವಿತರೆನಿಸಿ ಪ್ರಸಿದ್ಧರಾಗುವರು. ಒಟ್ಟುಗೂಡಿಸದಿದ್ದರೆ ಈ ಶಕ್ತಿಯು ವ್ಯಯವಾಗುತ್ತದೆ. ಜೀವನ ವೆಂಬ ಯುದ್ಧದಲ್ಲಿ ಜಯಶಾಲಿಗಳಾಗ ಬೇಕಾದರೆ, ಜನ್ಮಜನ್ಮಾಂತರಗಳಿಂದ ಸಂಚಿತವಾದ ನಿಮ್ಮ ಅಂತ್ಯವಿಲ್ಲದ ಶಕ್ತಿ ಭಂಡಾರವನ್ನು ಹುಡುಕಿ ಹೊರತೆಗೆಯಿರಿ. ಪ್ರಬಲವಾದ ಉತ್ಸಾಹದಿಂದ, ಧೃತಿಗೆಡದ ನಿಶ್ಚಯದಿಂದ ಒಮ್ಮೆ ಮನಸ್ಸನ್ನು ಹತೋಟಿಗೆ ತರಲು ಸಾಧ್ಯವಾದರೆ ನಿಮ್ಮಿಂದ ಅಸಾಧ್ಯವಾದುದು ಯಾವುದೂ ಇರುವುದಿಲ್ಲ.




ಮನಸ್ಸು ಅತ್ಯಂತ ಚಂಚಲ ಹಾಗೂ ಹಟಮಾರಿಯಾದುದು. ಅದು ಇಡೀ ದಿನ ಎಲ್ಲೆಂದರಲ್ಲಿ ಓಡಾಡುತ್ತಿರುತ್ತದೆ; ಹೀಗಾಗಿ ಅದು ಯಾವ ದಿಕ್ಕಿಗೆ ಓಲಾಡುವುದೊ ಆ ದಿಕ್ಕಿನಿಂದ ಅದನ್ನು ಹಿಂತಿರುಗಿಸುವುದು ಬಹಳ ಕಷ್ಟ. ಅದನ್ನು ಸತ್‌ಚಿಂತನೆಯಲ್ಲೇ ಯಾವಾಗಲೂ ಇರಿಸಿದರೆ, ಅದು ಅತ್ತಲೇ ವಾಲಿಕೊಂಡರೆ, ಆಗ ಅದು ನಮ್ಮ ಜೀವನವನ್ನು ಮಹತ್ತಾಗಿಸುತ್ತದೆ. ನಿಮ್ಮಲ್ಲಿರುವ ಅಪಾರ ಮನಶ್ಶಕ್ತಿಯ ಕುರಿತು ಒಮ್ಮೆ ಅರಿತುಕೊಳ್ಳಿ, ಮನಸ್ಸನ್ನು ಸರಿಯಾದ ಮಾರ್ಗದಲ್ಲಿ ನಡೆಸುವುದಕ್ಕಾಗಿ ಕೆಳಗೆ ಹೇಳಿರುವ ನಿಯಮಗಳನ್ನು ಪಾಲಿಸಿರಿ:

೧. ಮನಸ್ಸನ್ನು ಯಾವಾಗಲೂ ಒಳ್ಳೆಯ ಆಲೋಚನೆಗಳಲ್ಲೇ ತೊಡಗಿಸಿ.

೨. ನಿಮ್ಮ ಪಾಲಿಗೆ ಬಂದಂತಹ ಕೆಲಸಗಳು ಸಣ್ಣದಿರಲಿ, ದೊಡ್ಡದಿರಲಿ, ಎಲ್ಲವನ್ನೂ ದೇವರ ಪೂಜೆ ಎಂಬ ದೃಷ್ಟಿಯಿಂದ, ಪರಮ ಶ್ರದ್ಧೆಯಿಂದ ಮಾಡಬೇಕು. ಪರಿಶ್ರಮಪಟ್ಟೂ ನಿಂದೆಗೆ ಗುರಿಯಾಗುವಂತಹ ಮೂರ್ಖತನಕ್ಕಿಂತ ಬೇರಿನ್ನೇನು ತಾನೆ ಇದೆ! ಆದ್ದರಿಂದ ಎಲ್ಲ ಕೆಲಸಗಳನ್ನು ಎಷ್ಟು ಎಚ್ಚರಿಕೆಯಿಂದ ಮಾಡಬೇಕೆಂದರೆ, ನಿಮಗೆ ಯಾರೂ ಯಾವ ರೀತಿಯ ನಿಂದೆಯನ್ನು ಮಾಡಲೂ ಅವಕಾಶ ಕೊಡದಂತಿರಬೇಕು.

೩. "ಛಾತ್ರಾಣಾಮ್ ಅಧ್ಯಯನಂ ತಪಃ" (ವಿದ್ಯಾರ್ಥಿಗಳಿಗೆ ಅಧ್ಯಯನವೆ ತಪಸ್ಸು) – ಆದ್ದರಿಂದ ಅಧ್ಯಯನಕ್ಕೆ ಸಂಬಂಧಿಸಿದಂತೆ ಯಾವುದೇ ಲೋಪದೋಷವಾಗದಂತೆ ನೋಡಿಕೊಳ್ಳಿರಿ.

೪. ಎಲ್ಲಾ ಮಾನವರನ್ನೂ ನಿಮ್ಮವರಂತೆ ಭಾವಿಸಿರಿ; ಎಲ್ಲಾ ದೇಶಗಳನ್ನೂ ನಿಮ್ಮ ಜನ್ಮಭೂಮಿಯಂತೆ ಪ್ರೀತಿಸಿರಿ; ಎಲ್ಲಾ ಧರ್ಮಗಳನ್ನೂ ಶ್ರದ್ಧೆಯಿಂದ ನೋಡಿರಿ.

೫. 'ಮನಸ್ಸು ನನ್ನ ಸೇವಕ, ನಾನು ಮನಸ್ಸಿನ ಒಡೆಯ', ಈ ಜ್ಞಾನವನ್ನು ಗಟ್ಟಿ ಮಾಡಿಕೊಂಡು, ಮನಸ್ಸು ಸುಲಭವಾಗಿ ಉದ್ವಿಗ್ನಗೊಳ್ಳದಂತೆ ನೋಡಿಕೊಳ್ಳಬೇಕು. ಮನಸ್ಸಿನ ಕೋಮಲತೆ, ಅಧಃಪತನದತ್ತ ಕರೆದೊಯ್ಯುವ ಸನ್ನಿವೇಶಗಳಲ್ಲಿ ಭಾವುಕತೆಯನ್ನು ಎಂದೂ ವ್ಯಕ್ತಪಡಿಸದಂತೆ ನೋಡಿಕೊಳ್ಳಬೇಕು.

೬. ಭಗವಂತನ ಹಾಗೂ ಮಹಾಪುರುಷರ ಜೀವನದ ಸೌಂದರ್ಯ, ಮಾಧುರ್ಯ ಹಾಗೂ ಐಶ್ವರ್ಯಗಳ ಚಿಂತನೆಯಿಂದ ಮನಸ್ಸು ಶುದ್ಧವೂ, ಪ್ರಸನ್ನವೂ, ಏಕಾಗ್ರವೂ ಹಾಗೂ ಶಕ್ತಿಶಾಲಿಯೂ ಆಗುತ್ತದೆ.

## ಬುದ್ಧಿ

ಹಲವು ಅನುಭವಗಳ ಮೂಲಕ ಪರಿಪಕ್ವವಾದ ವಿಚಾರಶಕ್ತಿಗೆ ಬುದ್ಧಿ ಎನ್ನುತ್ತಾರೆ. ಮನುಷ್ಯನ ಎಲ್ಲ ಅಭಿವೃದ್ಧಿಯ ಮೂಲ ಆತನ ತೀಕ್ಷ್ಣಬುದ್ಧಿ. ಅವನ ಎಲ್ಲ ಅವನತಿಗಳಿಗೆ ಕಾರಣ ಬುದ್ಧಿಯ ಕೊರತೆ. ಯಾರ ಬುದ್ಧಿಯು ಎಷ್ಟು ವಿಕಾಸಗೊಂಡಿದೆಯೊ, ಅವರ ಕೆಲಸ–ಕಾರ್ಯಗಳು ಅಷ್ಟು ಸುಂದರವಾಗಿಯೂ, ಮಂಗಳಕಾರಿಯೂ ಆಗುವುವು. ಬುದ್ಧಿವಿಕಾಸಕ್ಕಾಗಿಯೆ ಶಿಕ್ಷಣವಿರುವುದು. ಬುದ್ಧಿಯನ್ನು ಶುದ್ಧಗೊಳಿಸುವ ಉಪಾಯವನ್ನು ಅವಲಂಬಿಸದೆ, ಅದನ್ನು ಸುಮ್ಮನೆ ಬೆಳೆಯುವುದಕ್ಕೆ ಬಿಟ್ಟರೆ, ಮಾನವನಿಗೆ ಕೆಡಕು ಉಂಟಾಗುತ್ತದೆ. ಇಂದಿನ ದಿನಗಳಲ್ಲಿ ಮನುಷ್ಯನ ಬುದ್ಧಿಯು ಬಹಳ ಬೆಳೆದಿದೆಯೆಂಬುದರಲ್ಲಿ ಸಂಶಯವಿಲ್ಲ, ಆದರೆ ಅದು ಶುದ್ಧವಾದದ್ದಲ್ಲ. ತನ್ನ ಹಾಗೂ ತನ್ನವರ ಶ್ರೇಯಸ್ಸು ಹೇಗೆ ಉಂಟಾಗುವುದೆಂಬುದನ್ನು ಈ ಅಶುದ್ಧ ಬುದ್ಧಿಯ ಮೂಲಕ ತಿಳಿಯಲು ಸಾಧ್ಯವಿಲ್ಲ.

ಬುದ್ಧಿಯ ವಿಕಾಸವು ಹೇಗೆ ಆವಶ್ಯಕವೋ, ಅದನ್ನು ಹೆಚ್ಚು ಹೆಚ್ಚು ಶುದ್ಧ ಮಾಡಿಕೊಳ್ಳುವುದು ಅದಕ್ಕಿಂತಲೂ ಹೆಚ್ಚು ಪ್ರಯೋಜನ. ಆದರೆ ಇದನ್ನು ಮಾಡುವುದು ಸುಲಭದ ಮಾತಲ್ಲ. ಶಿಕ್ಷಣದ ಜೊತೆ–ಜೊತೆಗೆ ಬುದ್ಧಿಯನ್ನು ನಿರ್ಮಲವಾಗಿಟ್ಟುಕೊಳ್ಳುವ ಎಲ್ಲ ರೀತಿಯ ಉಪಾಯಗಳನ್ನೂ ಪ್ರಯೋಗಿಸಬೇಕು.

ಯಾವ ಬುದ್ಧಿಯಿಂದ ಮಾನವನಿಗೆ ಎಲ್ಲ ಕಾಲದಲ್ಲಿಯೂ ನೆಲೆನಿಲ್ಲುವ ಮಂಗಳವು ಲಭಿಸುವುದಿಲ್ಲವೋ, ಅಂತಹ ಬುದ್ಧಿ, ಬುದ್ಧಿಯೇ ಅಲ್ಲವೆಂಬುದನ್ನು ನೆನಪಿನಲ್ಲಿಡಿ. ಭಾರತದ ಆತ್ಮ ವಿಜ್ಞಾನಿಗಳು ಯುಗ–ಯುಗಗಳಿಂದ, ನಿರಂತರವಾಗಿ, ಆಳವಾದ ಸಂಶೋಧನೆಗಳನ್ನು ನಡೆಸಿ, ಜೀವಿಯ ಆದಿ–ಮಧ್ಯ–ಅಂತಗಳನ್ನು ವೈಜ್ಞಾನಿಕವಾಗಿ, ಸಂಶಯಕ್ಕೆಡೆಯಿಲ್ಲದಂತೆ ಕಂಡುಹಿಡಿದಿದ್ದಾರೆ. ಅವುಗಳಲ್ಲಿ ಆವಶ್ಯಕವಾದ ಕೆಲವು ವಿಷಯಗಳನ್ನು ತಿಳಿದುಕೊಳ್ಳದಿದ್ದರೆ, ಮಾನವನ ಬುದ್ಧಿಯು ತನ್ನ ಹಿತಾಹಿತಗಳ ಸಂಬಂಧವಾಗಿ ಕರ್ತವ್ಯವನ್ನು ನಿರ್ಧರಿಸಲು ಸಮರ್ಥವಾಗುವುದಿಲ್ಲ.

ಇಂದಿನ ಕಾಲದಲ್ಲಿ ಮಾನವನ ವಿಷಯಭೋಗಕ್ಕಾಗಿ ಅದೆಷ್ಟು ದೊಡ್ಡ ವ್ಯವಸ್ಥೆಯಿದೆ! ಅದರಿಂದ ಆಗುವ ಪರಿಣಾಮಗಳ ಸಂಬಂಧವಾಗಿ ಆಧುನಿಕ ಚಿಂತಕರು ನಿಖರವಾದ ಮಾಹಿತಿಯನ್ನು ನಮಗೆ ನೀಡಿಲ್ಲ. ಇದರ ಫಲವಾಗಿ ಜಗತ್ತಿನಲ್ಲಿ ಕೆಟ್ಟ ಆಲೋಚನೆಗಳಿಗೂ, ಅಶಾಂತಿಗೂ ಅಂತ್ಯವೇ ಇಲ್ಲದಾಗಿದೆ. ಈ ವಿಷಯದಲ್ಲಿ, ನೀವು ತಿಳಿದು ಕೊಳ್ಳಬೇಕಾದ ವಿಷಯಗಳ ಸಾರವನ್ನು ಬಹಳ ಸಂಕ್ಷೇಪವಾಗಿ ಇಲ್ಲಿ ಕೊಟ್ಟಿದ್ದೇನೆ.

೧. ಈ ಜಗತ್ತಿನ ರೂಪ–ರಸಗಳೇ ಮೊದಲಾದವುಗಳನ್ನು ಭೋಗಿಸುವುದಕ್ಕಾಗಿ, ಪ್ರತಿಯೊಂದು ಜೀವಿಯು, ಲೆಕ್ಕವಿಲ್ಲದಷ್ಟು ಬಾರಿ ದೇಹ ನಷ್ಟವಾದರೂ ಮತ್ತೊಂದು ದೇಹವನ್ನು ನಿರ್ಮಿಸಿಕೊಳ್ಳುತ್ತದೆ.

೨. ಹಿಂದು ಹಿಂದಿನ ಜನ್ಮಗಳ ಅನುಭವಗಳಿಗೆ ಅನುಸಾರವಾಗಿ ಮುಂದಿನ ಜನ್ಮದ ದೇಹ–ಮನಸ್ಸುಗಳು ರೂಪುಗೊಳ್ಳುತ್ತವೆ. ಹಾಗೇ ಅದರ ಮೂಲಕ ಜೀವವು ತಾನು ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತದೆ.

೩. ಯಾವಾಗ ಜೀವಿಗೆ ಮೃತ್ಯುವುಂಟಾಗುವುದೊ ಆಗ ಸ್ಥೂಲ ಶರೀರವು ಮಾತ್ರ ನಷ್ಟವಾಗುತ್ತದೆ; ಸೂಕ್ಷ್ಮ ಶರೀರದಲ್ಲಿ ಸಮಸ್ತ ಶುಭಾಶುಭ ಸಂಸ್ಕಾರಗಳು ಸಂಚಿತವಾಗಿರುತ್ತವೆ. ಆ ಎಲ್ಲ ಸಂಸ್ಕಾರಗಳನ್ನೇ ಲೋಕವು 'ಅದೃಷ್ಟ' ಅಥವಾ 'ಹಣೆಬರಹ' ಎಂದು ಕರೆಯುತ್ತದೆ.

೪. ಜೀವವು ಇಚ್ಛೆಸಿಯೇ ಕರ್ಮವನ್ನು ಮಾಡುತ್ತದೆ, ಆದ್ದರಿಂದ ಕರ್ಮದ ಫಲವನ್ನು ಅನುಭವಿಸಲು ಅದು ಬದ್ಧ.

೫. ಆ ಕರ್ಮರಹಸ್ಯವನ್ನು ಅರಿತು ಸನ್ಮಾರ್ಗದಲ್ಲಿ ನಡೆಯುತ್ತ, ಭಗವದ್ಭಕ್ತಿಯಿಂದ ಒಳ್ಳೆಯದು–ಕೆಟ್ಟದ್ದು ಎಂಬ ಭೇದವನ್ನು ದಾಟಲು ಪ್ರಯತ್ನಪಟ್ಟರೆ, ತಾನು ಮಾಡಿದ ಕೆಟ್ಟ ಕೆಲಸಗಳ ಕೆಟ್ಟ ಫಲವನ್ನು ಅನುಭವಿಸದೇ ತಪ್ಪಿಸಿಕೊಳ್ಳಲೂಬಹುದು. ಒಟ್ಟಿನಲ್ಲಿ, ಶರೀರ–ಮನಸ್ಸುಗಳ ಕರ್ಮಗಳ ಫಲಾಫಲಗಳ ವಿಷಯವಾಗಿ ಸ್ಪಷ್ಟವಾದ ಅಭಿಪ್ರಾಯವನ್ನು ಗಳಿಸಿಕೊಂಡು ಆತ್ಮಹಿತವನ್ನು ಉಂಟು ಮಾಡುವ ಕರ್ಮ ಮತ್ತು ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವುದೇ ಶಿಕ್ಷಣದ ಉದ್ದೇಶ. ಈ ಮಾರ್ಗವು ವಿವೇಕಬುದ್ಧಿಯನ್ನು ತಂದುಕೊಡುತ್ತದೆ.

ಕೆಳಗೆ ಸೂಚಿಸಿರುವ ನಿಯಮಗಳನ್ನು ಪಾಲಿಸಿದರೆ ಈ ಗುರಿಸಾಧನೆಗೆ ಬಹಳ ಅನುಕೂಲವಾಗುತ್ತದೆ:

೧. ಆದರ್ಶಜೀವನವನ್ನು ರೂಪಿಸಿಕೊಳ್ಳಬೇಕೆಂಬ ಪ್ರಬಲವಾದ ಉತ್ಸಾಹವೇ ಉನ್ನತಿಗೆ ಮೂಲ ಕಾರಣ. ಅದಕ್ಕಾಗಿ ಮಹಾಪುರುಷರ ಜೀವನ ಆದರ್ಶವನ್ನು ಕುರಿತು ಆಲೋಚಿಸಿರಿ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರ ಗ್ರಂಥಗಳು ವಿಶೇಷವಾಗಿ ಸಹಾಯ ಮಾಡುತ್ತವೆ.

೨. ಕೆಲಸಗಳಲ್ಲಿ ತೊಡಗದಿದ್ದರೆ ಬುದ್ಧಿಯು ಶುದ್ಧವಾಗದು. ಆದ್ದರಿಂದ ಎಷ್ಟು ಸಾಧ್ಯವೊ ಅಷ್ಟು, ವಿವಿಧ ರೀತಿಯ ಕೆಲಸಗಳನ್ನು ಕಲಿತುಕೊಳ್ಳಿ. ಮನೆಯನ್ನು ವ್ಯವಸ್ಥಿತವಾಗಿಡುವುದು, ಹೂತೋಟವನ್ನು ಮಾಡುವುದು, ಸಂಗೀತದ ಅಭ್ಯಾಸ, ಸಾಹಿತ್ಯದ ಅಧ್ಯಯನ, ಚಿತ್ರರಚನೆ– ಮೊದಲಾದ ಕೆಲಸಗಳಲ್ಲಿ ನಿಮ್ಮನ್ನು ಉತ್ಸಾಹದಿಂದ ತೊಡಗಿಸಿಕೊಳ್ಳಿ.

೩. ಮನಸ್ಸಿನಲ್ಲಿ ದೃಢಸಂಕಲ್ಪವನ್ನು ಮಾಡಿ– ನಾನು ಇನ್ನೊಬ್ಬರನ್ನು ಅವಲಂಬಿಸದೆ ಎಲ್ಲ ವಿಷಯಗಳಲ್ಲಿ ಸ್ವತಂತ್ರನಾಗಿರಲು ಪ್ರಯತ್ನಿಸುವೆ.

೪. ಪರಾಮರ್ಶಿಸದೆ ಯಾವುದೇ ವಿಷಯದಲ್ಲಿ ತೊಡಗಬಾರದು. ಕೆಲಸ, ವ್ಯಕ್ತಿ, ಮತ, ಆಹಾರ ಪದಾರ್ಥಗಳು ಮೊದಲಾದ ವಿಷಯಗಳಲ್ಲಿ ವಿಚಾರವಿಲ್ಲದ ರಾಗ–ದ್ವೇಷಗಳನ್ನು ಹೊಂದಿರುವುದು ಬಹಳ ಹಾನಿಕರ.

೫. ನಾನು ಯಾರಿಗೂ ಕೆಡುಕನ್ನುಂಟುಮಾಡೆನು. ಅಷ್ಟೆ ಅಲ್ಲ, ಯಾರು ನನ್ನೊಂದಿಗೆ ಶತ್ರುಗಳಂತೆ ವರ್ತಿಸುವರೋ, ಅವರಿಗೂ ಸಹ ನಾನು ಉಪಕಾರವನ್ನೇ ಮಾಡುವೆನೆಂಬ ದೃಢಸಂಕಲ್ಪವನ್ನು ಮಾಡಿ.

೬. ಭಗವತ್ ತತ್ತ್ವವನ್ನು ಅರಿತುಕೊಂಡು ಮಾಡುವ ಅವನ ಪೂಜೆಯು ಶುದ್ಧಬುದ್ಧಿಯನ್ನು ಗಳಿಸಲು ಶ್ರೇಷ್ಠತಮ ಉಪಾಯ.

ಕೊನೆಯಲ್ಲಿ, ಬುದ್ಧಿಗೆ ಸಂಬಂಧಿಸಿದಂತೆ ಒಂದು ವಿಶೇಷವಾದ, ಅತಿ ಮುಖ್ಯವಾದ ವಿಷಯವನ್ನು ತಿಳಿದುಕೊಳ್ಳಿ. ಒಂದು ಸರ್ವಜ್ಞಬುದ್ಧಿಯು ಈ ಸಮಗ್ರ ಸೃಷ್ಟಿಯನ್ನು ನಡೆಸುತ್ತಿದೆ. ನಿಮ್ಮ ವ್ಯಕ್ತಿಗತವಾದ ಬುದ್ಧಿಯು ಎಷ್ಟೇ ಅಲ್ಪವಾದರೂ ಅದು ಅದರ ಒಂದಂಶ ಮಾತ್ರ.

ತೀವ್ರವಾದ ಇಚ್ಛೆಯ ಬಲದಿಂದ, ನಮ್ಮ ಈ ಕ್ಷುದ್ರಬುದ್ಧಿಯನ್ನು ಆ ಮಹಾನ್ ಬುದ್ಧಿಯೊಂದಿಗೆ ಒಂದಾಗಿಸಬೇಕು. ಅದು ಸಾಧ್ಯವಾದಾಗ ಈ ಕ್ಷುದ್ರಬುದ್ಧಿಯೆ ಆ ಮಹಾನ್ ಬುದ್ಧಿಯಾಗಿ ವಿಕಾಸ ಹೊಂದುವುದು.

ಪ್ರತಿದಿನವೂ ಹೀಗೆ ಪ್ರಾರ್ಥನೆ ಮಾಡಿ, 'ಭಗವಂತನು ನನ್ನ ಬುದ್ಧಿಯನ್ನು ಸತ್ಯಮಾರ್ಗದಲ್ಲಿ ನಡೆಸಲಿ.'

(ಮುಂದುವರಿಯುವುದು)